ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ,
ಹೆಚ್.ಡಿ.ಕೋಟೆ

**ಸಿ.ಸಿ. ನಂ. 567/2019**
ಸಾಕ್ಷಿಗೆ ದಿನಾಂಕಃ **7.6.2022** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀಸವಾಲುಃ ಎಪಿಪಿ ರವರಿಂದಃ</u>

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು 8 ನೇ ತರಗತಿ ಓದಿರುತ್ತೇನೆ. ನಾನು ನಿಪಿ 1 ನ್ನು ಬೆರಳಚ್ಚು ಮಾಡಿಸಿಕೊಟ್ಟಿರುತ್ತೇನೆ. ನಾನು ಮೈಸೂರಿನಲ್ಲಿ ಬೆರಳಚ್ಚು ಮಾಡಿಸಿರುತ್ತೇನೆ. ಸಾಮಾನ್ಯವಾಗಿ ವೈದ್ಯರ ಬಳಿ ಹೋದರೆ ಔಷಧಿ ಚೀಟಿ ನಿಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿ ನೀಡಿರುವುದಿಲ್ಲ ಎನ್ನುವರು. ಸಾಮಾನ್ಯವಾಗಿ ಅನಾರೋಗ್ಯ ಇದ್ದಾಗ ರೋಗಿಗಳು ಕ್ಲಿನಿಕ್ಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. ನನ್ನ ಮಗನನ್ನು ಚಿಕಿತ್ಸೆಗೆ ಕರೆದುಕೊಂಡು ಹೋದಾಗ ಕ್ಲಿನಿಕ್ನಲ್ಲಿ ಯಾರೂ ಇದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿಯು ತನ್ನ ಮಗುವನ್ನು ಕ್ಲಿನಿಕ್ಗೆ ಹೋದಾಗ ಅವರ ತಾಯಿ ಮತ್ತು ಹೆಂಡತಿ ಇದ್ದರು. ಆರೋಪಿ ನನ್ನ ಮಗನಿಗೆ ಇಂಜೆಕ್ಷನ್ ಮಾಡಿದ್ದನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಆರೋಪಿಯ ಕ್ಲಿನಿಕ್ ಗೆ ಹೆಸರು ಇರುವುದಿಲ್ಲ, ಅದು ಮನೆ ಆಗಿರುತ್ತದೆ. ಸಾಮಾನ್ಯವಾಗಿ ವೈದ್ಯರುರೋಗಿಯನ್ನು ಪ್ರತ್ಯೇಕವಾಗಿ ಪರೀಕ್ಷೆ ಮಾಡುತ್ತಾರೆ ಎಂದರೆ ಸರಿ. ಇಂಜೆಕ್ಷನ್ ಮಾಡಿದ ಮರುದಿನವೇ ನನ್ನ ಮಗನ ಖುಂಡಿಗೆ ಊತ ಮಧ್ಯಾಹ್ನ 2 ಗಂಟೆ ಅಷ್ಟರಲ್ಲಿ ಬಂದಿರುತ್ತದೆ. ಊತ ಬಂದ ವಿಚಾರ ನಾನು ದೂರಿನಲ್ಲಿ ತಿಳಿಸಿರುತ್ತೇನೆ. ನನ್ನ ಮಗನಿಗೆ ಆರೋಪಿ ಯಾವುದೇ ಇಂಜೆಕ್ಷನ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಔಷಧಿಯ ಚೀಟಿಯನ್ನು ಬರೆದು ಕೊಟ್ಟಿರುವುದಿಲ್ಲ ಆದರೆ ಅವರೇ ಮಾತ್ರೆ ನೀಡಿರುತ್ತಾರೆ. ಹಂಪಾಪುರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇರುತ್ತದೆ ಹಾಗೂ 24 ಗಂಟೆ ತರೆದಿರುತ್ತದೆ ಎಂದರೆ ಸರಿ. ನನ್ನ ಮಗನಿಗೆ ನಾನು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾತ್ರ ಚಿಕಿತ್ಸೆಯನ್ನು ಕೊಡಿಸಿರುತ್ತೇನೆ ಎಂದರೆ ಸರಿ. ನಾನು ಮತ್ತು ಪೋಲಿಸರು ಆರೋಪಿಯಿಂದ ಅಕ್ರಮವಾಗಿ ಹಣ ಪಡೆದುಕೊಳ್ಳುವ ಸಲುವಾಗಿ ಆತನ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ಮಗನ ಸಾವಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ,

ಪಂಚಾಯಿತಿ ಆರೋಪಿಯ ಮನೆ ಬಳಿ ಆಗಿರುತ್ತದೆ. ಪಂಚಾಯಿತಿಯಲ್ಲಿ ಚಾಸ 12 ರಿಂದ 17 ರವರು ಸೇರಿದ್ದರು. ಪಂಚಾಯಿತಿಯ ಬಗ್ಗೆ ಉಪ ನೋಂದಣಾಧಿಕಾರಿ ಬಳಿ ಒಂದು ದಾಖಲೆ ಬರೆಯಲಾಗಿರುತ್ತದೆ ಅದನ್ನು ನಾನು ಪೋಲಿಸರಿಗೆ ನೀಡಿರುತ್ತೇನೆ. ಯಾವುದೇ ಒಪ್ಪಂದ ಕರಾರು ಆಗಿರುವುದಿಲ್ಲ ಆಕಾರಣ ನಾನು ಅದನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಮಗ ಮೃತ ಪಟ್ಟ 6 ತಿಂಗಳ ನಂತರ ನಾನು ದೂರು ದಾಖಲೆ ಮಾಡಿರುತ್ತೇನೆ. ಆರೋಪಿ ಪರಿಹಾರ ನೀಡುತೆತೇನೆ ಎಂದು ಹೇಳಿದ ಕಾರಣ ನಾನು ತಡವಾಗಿ ದೂರು ನೀಡಿರುತ್ತೇನೆ. ಪೋಲಿಸರು ನನ್ನ ಹೇಳಿಕೆ ನನ್ನ ಮನೆ ಬಳಿ ಬಂದು ಪಡೆದಿರುತ್ತಾರೆ .ಪೊಲೀಸರಿಗೆ ನಾನು ಯಾವುದೇ ರೀತಿಯ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ಕ್ಕೆ ನಾನು ಪೋಲಿಸರು ಪಂಚನಾಮೆ ಜರುಗಿಸಲು ಬಂದಾಗ ಸಹಿ ಮಾಡಿರುತ್ತೇನೆ. ನನ್ನನ್ನು ಹೊರತುಪಡಿಸಿ ಆ ಸಮಯದಲ್ಲಿ ಚಾಸ 12 ರಿಂದ 14 ರವರು ಹಾಜರಿದ್ದರು. ನನ್ನ ಮಗ ಜೆ, ಎಸ್ ಎಸ್ ಆಸ್ಪತ್ರೆಯಲ್ಲಿ ಮೃತ ಪಟ್ಟರು. ನನ್ನ ಮಗ ಮೃತ ಪಟ್ಟ ದಿನ ಶವ ತನಿಖೆ ನಡೆದಿರುವುದಿಲ್ಲ ಎಂದರೆ ಸರಿ. ಜೆಎಸಎಸ್ ರವರ ವರದಿಯಲ್ಲಿ ನನ್ನ ಮಗನಿಗೆ ಹೃದಯ ಸಂಬಂಧ ಖಾಯಿಲೆ ಇತ್ತು ಎಂದು ತಿಳಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗ ಬೇರೆ ಕಾಯಿಲೆಯಿಂದ ಮೃತ ಪಟ್ಟಿರುತ್ತಾನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ